Right Bank Ghataprabha Canal

390. SRI M. G. JARTARGAR (Hubli).—Will the Minister of State for Major and Medium Irrigation be pleased to state.—

(*a*) the estimated expenditure in respect of the underground Tunnel (Kadabagatti) of Ghataprabha Right Bank Canal Project. When this work will be completed ; The name of the Contractor who has been entrusted with this work ;

(*b*) whether Jeeps and Vans facilities are given to the Contractor and Supervising Engineer of this underground Tunnel work if provided the reasons for the delay.

(*c*) even though the forcast of Heavy downpour and flood has been given who will be held responsible for the damages caused by the concerned establishments and the Officers ;

(*d*) whether it is a fact that dead bodies of 15 labourers who succumbed to death inside the Tunnel were removed ; if so, whether this case has been enquired into ;

(*e*) whether the compensation has been paid to each of the relatives of the deceased labourers, if so, what is the total amount ?

SRI B. B. CHIMMANAKATTI (Minister of State for Major and Medium Irrigation).—

(*a*) The estimated expenditure of Kadabagatti undergrouad Tunnel is Rs. 534.25 lakhs. The date of completion of this work is 6-3-1982. The particulars of the contractor, M/s. R. T. Shah & Company Mohalla Road, on Top Hill Bombay-400 037.

(*b*) The said Contractor and Supervising Engineer of this underground Tunnel work have got Jeeps and Vans. There is no difficulties in this Tunnel work.

(*c*) Enquiry is going on. So far it was not possible to detect the specific culprit.

(*d*) It is fact that 15 dead bodies of labourers were removed from the underground Tunnel, the case has been entrusted for enquiry.

(*e*) Compensation at the rate of Rs. 2,000 from the Government's side and at the rate of Rs. 1,000 from Contractor's side have been given to the each relatives of the deceased labourers. This is in addition to the compensation amount of Rs. 16,000 approximately payables to each as per rules which is still in force.

ಶ್ರೀ ಎಂ. ಜಿ. ಜರತಾರಗರ್.—ಘಟಪ್ರಭೆ ಬಲದಂಡೆ ನಾಲೆಯ ನಿರ್ಮಾಣದ ಅಂಗವಾಗಿ ರಚಿಸಲಿರುವ ಸುರಂಗ ಮಾರ್ಗದಲ್ಲಿ ಮೃತ ಕಾರ್ಮಿಕರ ಬಗ್ಗೆ ಆದ ಅನಾಹುತಕ್ಕೆ ಕಾರಣರಾರು

ಎನ್ನುವುದನ್ನು ತಿಳಿಸಿ, ಮತ್ತು ತನಿಖೆ ಯಾವ ಹಂತದಲ್ಲಿದೆ, ತನಿಖೆ ಯಾವಾಗ ಮುಗಿಯುತ್ತದೆ ತನಿಖಾ ಅಧಿಕಾರಿಗಳು ಯಾರು ?

† ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಘಟನೆ ಬಗ್ಗೆ ಪೋಲೀಸ್ ತನಿಖೆ ನಡೆದಿದೆ. ಪೋಲೀಸ್ ತನಿಖೆಯಲ್ಲಿ ಗುತ್ತಿಗೆದಾರರ ಮೇಲೆ ಕೇಸನ್ನು ಮಾಡಿದ್ದಾರೆ. ಇದರಲ್ಲಿ ನಿರ್ದಿಷ್ಟವಾಗಿ ೩ ಜನರ ಮೇಲೆ ಕೇಸನ್ನು ಹಾಕಿದ್ದಾರೆ. ಗುತ್ತಿಗೆದಾರ, ಆರ್. ಟಿ. ಶಹಾ, ಹೆಚ್.ಡಿ. ಅಪಾಟೆ ಮತ್ತು ಸುಬ್ಬಯ್ಯ ಸೈಟ್ ಇಂಜಿನಿಯರ್, ಷಹಾ ಕಂಪನಿಯವರು ಈ ೩ ಜನರ ಮೇಲೆ ಕೇಸ್‌ನ್ನು ಹಾಕಿದ್ದಾರೆ, ಇದರ ಬಗ್ಗೆ ತನಿಖೆ ಕೂಡ ಮುಂದುವರೆದಿದೆ.

ಶ್ರೀ ಕೆ. ರಾಮಭಟ್.—ಈ ಕೆಲಸ ನಡೆಯುತ್ತಾ ಇರಬೇಕಾದರೆ ಅದನ್ನು ಸೂಪರ್‌ವೈಸ್ ಮಾಡಲಿಕ್ಕೆ ಸರ್ಕಾರದ ವತಿಯಿಂದ ಯಾರು ಇಂಜಿನಿಯರ್ಸ್ ಇರುತ್ತಾರೆ, ಅವರೇನಾದರೂ ಮುಂಜಾಗ್ರತೆ ಕ್ರಮ ತೆಗೆದುಕೊಂಡಿದ್ದಾರೆ. ನೀರು ಬರುತ್ತಾ ಇರಬೇಕಾದರೆ ದೀರ್ಘವಾದ ಸುರಂಗ ಏನಿದೆ ಅಲ್ಲಿಂದ ಹೊರಗಡೆ ಬರಲಿಕ್ಕೆ ಎಮರ್ಜನ್ಸಿ ಎಗ್ಸಿಟ್ ವ್ಯವಸ್ಥೆ ಮಾಡಿದ್ದರೆ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೆ, ಈ ದುರ್ಘಟನೆ ನಡೆದದ್ದು ಆಕಸ್ಮಿಕವಾದುದು. ಅಲ್ಲಿ ಸುಮಾರು ೨೦ ಮಿಲಿಮಿಟರ್ ಧಾರಾಕಾರವಾದ ಮಳೆ ಸಂದರ್ಭದಲ್ಲಿ ಗುಡ್ಡದ ಮೇಲೆ ಹಳ್ಳದಲ್ಲಿ ಪ್ರೊಟೆಕ್ಷನ್ ವಾಲ್ ಕಟ್ಟಿದ್ದೆವು. ಆ ಪ್ರೊಟೆಕ್ಷನ್ ವಾಲ್‌ಗೆ ಬಂಡೆಗಲ್ಲುಗಳು ಬಂದು ಬಿತ್ತು. ಬಂಡೆಗಲ್ಲು ಬಿದ್ದ ಪರಿಣಾಮವಾಗಿ ವಾಲ್ ಕತ್ತರಿಸಿ ಬಿತ್ತು, ಇಡೀ ಸುರಂಗಮಾರ್ಗದಲ್ಲಿ ನೀರು ಹೋಗಿ ಅನಾಹುತ ಸಂಭವಿಸಿತು. ಈ ಅನಾಹುತ ಸಂಭವಿಸುವುದಕ್ಕೆ ಮುಂಚೆ ಮುಂಜಾಗ್ರತೆಗಾಗಿ ಎಮರ್ಜನ್ಸಿ ದೀಪದ ವ್ಯವಸ್ಥೆಯನ್ನು ಕೂಡ ಮಾಡಿತ್ತು. ಅದು ಸೂಚನೆ ಕೊಟ್ಟರೂ ಕೂಡ ಕೆಲಸ ಮಾಡತಕ್ಕ ಕೆಲಸಗಾರರು ಅದಷ್ಟು ಜಾಗ್ರತೆ ಬರುವ ಮುಂಚೆ ಟನಲ್ ವರ್ಕ್ ಮುಂಭಾಗದಲ್ಲಿ ಅವರು ಟ್ರಕ್ ಮೇಲೆ ಬರತಕ್ಕಂಥ ಸಂದರ್ಭದಲ್ಲಿ ನೀರು ಧಾವಿಸಿ ಸುರಂಗದ ಒಳಗೆ ಹೋದಕಾರಣ ಅವರು ಹೊರಗಡೆ ಬರಲಾರದೆ ಸಾವನ್ನಪ್ಪಿದ್ದಾರೆ. ಇದು ಅನಿರ್ದಿಷ್ಟ ಘಟನೆ.

ಶ್ರೀ ಜಿ. ಕೆ. ತಕ್ಕೇಡ್ —ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಇದು ಆಕಸ್ಮಿಕವಾಗಿ ಆದಂಥ ಘಟನೆ ಎಂದು ಹೇಳಿದ್ದಾರೆ ಇದು ಸುಳ್ಳು. ಏತಕ್ಕೆಂದರೆ ಇದಕ್ಕಿಂತ ಮುಂಚಿತವಾಗಿ ಅಲ್ಲಿ ಒಂದು ಸಾರಿ ಇಂಥಾದ್ದೇ ಒಂದು ಘಟನೆ ನಡೆದಿತ್ತು, ಆದುದರಿಂದ ಇದರ ಸಂಬಂಧವಾಗಿ ಅಲ್ಲಿರುವ ಸೂಪರಿಂಟೆಂಡೆಂಟ ಇಂಜಿನಿಯರ್‌ರವರಾಗಲೀ ಇಲ್ಲವೇ ಎಗ್ಸಿಕ್ಯುಟಿವ್ ಇಂಜಿನಿಯರ್‌ರವರಾಗಲೀ ಪೂರ್ವಭಾವಿಯಾಗಿ ಎಲ್ಲಾ ಸಿದ್ಧತೆ ಮಾಡಿದ್ದರೆ ಇಂಥಾ ದುರ್ಘಟನೆ ನಡೆಯುತ್ತಿರಲಿಲ್ಲ. ಇದಕ್ಕೆ ಹೊಣೆಗಾರರು ಅವರು ಎಂದು ಗೊತ್ತಾದ ಮೇಲಾದರೂ ಸರ್ಕಾರದವರು ಅವರ ಮೇಲೆ ಏತಕ್ಕೆ ಕ್ರಮವನ್ನು ತೆಗೆದುಕೊಂಡಿಲ್ಲ. ಆದುದರಿಂದ ಈ ದುರ್ಘಟನೆಗೆ ಮೂಲ ಕಾರಣರಾದವರನ್ನೇ ಮುಚ್ಚಿಡುತ್ತಿದ್ದಾರೆ. ಅವರ ಮೇಲೆ ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ ? ಮತ್ತೆ ಇಲ್ಲಿಯವರೆಗೆ ಅವರಿಗ್ಯಾರಿಗೂ ಇನ್ನೂ ಕಾಂಪೆನ್‌ಸೇಷನ್ ಕೊಟ್ಟಿಲ್ಲ, ಆ ರೀತಿಯಾಗಿ ಕಾಂಪನ್‌ಸೇಷನ್ ಕೊಡದೇ ಇರುವ ಅಧಿಕಾರಿಗಳ ಮೇಲೆ ಸಹ ಯಾವ ರೀತಿಯ ಕಾರ್ಯಕ್ರಮವನ್ನು ಕೈಗೊಂಡಿದ್ದೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ನಾನು ಹೇಳಿದ್ದು ಸತ್ಯಕ್ಕೆ ದೂರವಾದದ್ದು ಎಂದು ಹೇಳಿದರು. ಇದು ಆಕಸ್ಮಿಕವಾಗಿ ನಡೆದಂಥ ಘಟನೆ ಇದನ್ನು ಮುಂಚಿತವಾಗಿ ಹೇಗೆ ಹೇಳುವುದಕ್ಕೆ ಸಾಧ್ಯ ? ಅಲ್ಲಿ ಪ್ರೊಟೆಕ್ಷನ್ ವಾಲ್ ಮಾಡಲಾಗಿತ್ತು ಆದರೂ ಸಹ ಸುರಂಗ ಮಾರ್ಗದಲ್ಲಿ ನೀರು ನುಗ್ಗಿದ್ದರಿಂದ ಇದು ಆಕಸ್ಮಿಕವಾದ ದುರ್ಘಟನೆ ನಡೆದಿದೆ. ಮತ್ತೆ ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಅಲ್ಲಿ ಸತ್ತಂಥ ಜನರಿಗೆ ನಾವು ಈಗಾಗಲೇ ೨ ಸಾವಿರ ರೂಪಾಯಿಗಳನ್ನು ಕಾಂಪನ್‌ಸೇಷನ್ ಆಗಿ ಕೊಟ್ಟಿದ್ದೇವೆ. ಇದೂ ಅಲ್ಲದೆ ಅವರೂ ಕೂಡ ಲೇಬರ್ ಕೋರ್ಟಿಗೆ ಹೋಗಿದ್ದರಿಂದ, ಅಲ್ಲಿ ಸಹ ಸುಮಾರು ೨,೫೫,೨೦೦ ರೂಪಾಯಿಗಳನ್ನು ಅಲ್ಲಿ ಸತ್ತಂಥ ೧೫ ಜನರಿಗೆ ಕಾಂಪನ್‌ಸೇಷನ್ ಆಗಿ ಕೊಡಬೇಕೆಂದು ತೀರ್ಮಾನವಾಗಿದೆ. ಈಗ ಸದ್ಯಕ್ಕೆ ಇಬ್ಬರಿಗೆ ಕಾಂಪನ್‌ಸೇಷನ್ ಕೊಟ್ಟಿದ್ದೇವೆ. ಅದರಲ್ಲಿ ಒಬ್ಬರಿಗೆ ಅಣ್ಣಪ್ಪ ದೇಸಾಯಿ ಎನ್ನುವವರಿಗೆ ೧೮ ಸಾವಿರ ರೂಪಾಯಿಗಳನ್ನು ಮತ್ತೆ ಶರಣಪ್ಪ ಬರಾದರ್ ಎನ್ನುವವರಿಗೆ ೧೬ ಸಾವಿರದ ೮೦೦ ರೂಪಾಯಿಗಳನ್ನು

ಕೊಟ್ಟಿದ್ದೇವೆ ಇನ್ನು ಉಳಿದ ೧೩ ಜನರಿಗೆ ಆದಷ್ಟು ಬೇಗ ಪಣವನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ. ಪಿ. ಕಕ್ಕಿಲಾಯ.—ಅಧ್ಯಕ್ಷರೇ, ನಾವು ಈ ಸುರಂಗ ಮಾರ್ಗವನ್ನು ಸಂದರ್ಶನ ಮಾಡಿ ಕೊಂಡು ಬಂದಿದ್ದೇವೆ. ನಾವು ಪಬ್ಲಿಕ್ ಅಕೌಂಟ್ಸ್ ಕಮಿಟಿ ಮುಖಾಂತರ ಅಲ್ಲಿಗೆ ಹೋಗಿದ್ದಾಗ, ಅಲ್ಲಿರುವ ಕಾರ್ಮಿಕರ ತಲೆಯ ಮೇಲೆ ಮಣ್ಣಿನ ಹೆಂಟಿಗಳು, ಕಲ್ಲು, ಮಣ್ಣು ಆಗಿಂದಾಗ್ಗೆ ಬೀಳುತ್ತಿದ್ದು. ಅವರಿಗೆ ಅದರಿಂದ ರಕ್ಷಣೆ ಕೊಂಡುವುದಕ್ಕೆ ಯಾವುದೇ ರೀತಿಯ ಸೌಲಭ್ಯವನ್ನು ಅಲ್ಲಿರುವ ಕಂಟ್ರಾಕ್ಟರ್ ಆಗಲೀ ಇಲ್ಲವೇ ಸರ್ಕಾರದ ವತಿಯಿಂದ ಆಗಲೀ ಒದಗಿಸಿಲ್ಲವೆಂದು ನಮ್ಮ ಗಮನಕ್ಕೆ ತಂದಿದ್ದರು. ಆದುದರಿಂದ ಅದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ದಯವಾಡಿ ಆದರ ಬಗ್ಗೆ ನೋಡಿ ಮತ್ತೆ ಇನ್ನು ಮುಂದಾದರೂ ಇಂಥಾ ಅಪಘಾತಗಳು ಆಗದ ಹಾಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಕಂಟ್ರಾಕ್ಟರ್‌ರವರ ಮುಖಾಂತರವಾಗಲೀ ಇಲ್ಲವೇ ಡಿಪಾರ್ಟ್‌ಮೆಂಟಿನ ಮೂಲಕವಾಗಲೀ ತೆಗೆದುಕೊಳ್ಳುವುದಕ್ಕೆ ಆದೇಶ ನೀಡುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಇದರಲ್ಲಿ ಪ್ರಿಕಾಷನರಿ ಮೆಜರ್ಸ್ ತೆಗೆದುಕೊಂಡಿದ್ದೇವೆಂದು ಈಗಾಗಲೇ ಹೇಳಿದ್ದೇನೆ. ಮತ್ತೆ ಮಾನ್ಯ ಸದಸ್ಯರು ಹೇಳುವ ಹಾಗೆ ಎಲ್ಲೆಲ್ಲಿ ಟನಲ್ ವರ್ಕ್ಸ್ ನಡೆಯುತ್ತಿದೆ ಅಲ್ಲಿ ಕೆಲಸ ಮಾಡುತ್ತಿರುವ ನೌಕರರ ತಲೆಯ ಮೇಲೆ ಕಲ್ಲು, ಮಣ್ಣು ಬೀಳುವುದರಿಂದ ಅದಕ್ಕೆ ಪ್ರೊಟೆಕ್ಷನ್ ಕೊಡಬೇಕೆಂದು ಹೇಳುತ್ತಿದ್ದಾರೆ. ಆದಕ್ಕೆ ನಾವು ಸೂಕ್ತ ರಕ್ಷಣೆಯನ್ನು ಒದಗಿಸಿ ಕೊಟ್ಟಿದ್ದೇವೆ ಎಲ್ಲೆಲ್ಲಿ ಕಂಟ್ರಾಕ್ಟರ್‌ಗಳು ಆ ರೀತಿಯಾಗಿ ಒದಗಿಸಿಕೊಟ್ಟಿಲ್ಲವೋ ಅಂಥಾ ಕಡೆ ಒದಗಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್. ಎಸ್. ಪಾಟೀಲ್.—ಇದನ್ನು ೬-೩-೮೨ಕ್ಕೆ ಮುಗಿಸುತ್ತೇವೆ ಎನ್ನುವ ಮಾತನ್ನು ಇಲ್ಲಿ ಹೇಳಿದ್ದೀರಿ. ಈ ಟನಲ್‌ಗಾಗಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ? ಟನಲ್‌ನ ಉದ್ದ ಸುಮಾರು ೬ ಕಿಲೋ ಮೀಟರ್ ಇದೆ ಇಷ್ಟು ಕಿಲೋ ಮೀಟರ್ ಉದ್ದದ ಸುರಂಗ ಮಾರ್ಗದ ಕೆಲಸವನ್ನು ಇಷ್ಟು ಖಚಿತವಾಗಿ ೬-೩-೮೨ಕ್ಕೇ ಮುಗಿಸುತ್ತೇವೆಂದು ಹೇಳುತ್ತಿದ್ದೀರಲ್ಲಾ, ನಾವು ಈಗಾಗಲೇ ೧೯೮೧ರಲ್ಲಿದ್ದೇವೆ, ೧೯೮೨ ಎನೂ ದೂರವಿಲ್ಲ, ಈಗಿರುವ ಅಲ್ಪ ಸಮಯದಲ್ಲಿ ಈ ಕೆಲಸವನ್ನು ಮುಗಿಸುವುದಕ್ಕೆ ಆಗುತ್ತದೆಯೇ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಈ ಕೆಲಸವನ್ನು ಗುತ್ತಿಗೆದಾರರಾದ ಶ್ರೀ ಆರ್.ಟಿ. ಶಹಾ ರವರು ತೆಗೆದುಕೊಂಡಿದ್ದಾರೆ ಇದನ್ನು ನಾವು ಅವರಿಗೆ ೬-೧೨-೧೯೭೯ರಲ್ಲಿ ಒದಗಿಸಿ ಕೊಟ್ಟಿದ್ದೇವೆ. ಮತ್ತೆ ಅವರೊಡನೆ ಆಗಿರುವ ಅಗ್ರಿಮೆಂಟ್ ಪ್ರಕಾರ ಅವರು ೧೯೮೨ಕ್ಕೆ ಮುಗಿಸಿ ಕೊಡುವುದಾಗಿ ಕರಾರು ಆಗಿದೆ. ಸ್ವಲ್ಪ ಕಾಲಾವಕಾಶವನ್ನು ಹೆಚ್ಚಿಸಬೇಕೆಂದು ಕೇಳುತ್ತಿದ್ದಾರೆ ಆದು ಸರ್ಕಾರದ ಪರಿಶೀಲನೆಯಲ್ಲಿದೆ. ಮತ್ತು ಇದನ್ನು ಆದಷ್ಟು ಬೇಗ ಮುಗಿಸಬೇಕು ಎನ್ನುತಕ್ಕ ಆಸಕ್ತಿ ಸರ್ಕಾರಕ್ಕೆ ಇದೆ.

ಶ್ರೀ ಎಂ. ಜಿ. ಜರತಾರಗರ.—ಅಧ್ಯಕ್ಷರೇ, ಇದು ಏನು ಮೊದಲನೆಯ ಸಾರಿಯಾಗಿ ನಡೆದಿರತಕ್ಕಂಥ ಘಟನೆಯಲ್ಲ, ಕಳೆದ ವರ್ಷ ಇದೇ ತರಹದ ಘಟನೆ ನಡೆದಿತ್ತು. ಈ ರೀತಿಯಾಗಿ ಆಗಬಹುದೆಂದು ಅಲ್ಲಿರುವ ಅಧಿಕಾರಿಗಳಿಗೆ ಗೊತ್ತಿದ್ದರೂ ಸಹ ಅವರು ಮುನ್ನೆಚ್ಚರಿಕೆಯ ಕ್ರಮವನ್ನು ಅಲ್ಲಿ ಕೈಗೊಂಡಿಲ್ಲ. ಅವರು ಮುನ್ನೆಚ್ಚರಿಕೆಯ ಕ್ರಮವನ್ನು ಕೈಗೊಂಡಿದ್ದರೆ ಇಂಥಾ ದುರ್ಘಟನೆಯೇ ನಡೆಯುತ್ತಿರಲಿಲ್ಲ. ಪಂತ್ತೆ ಪೋಲೀಸ್ ಇಲಾಖೆಯವರಿಂದ ಏನು ತನಿಖೆ ನಡೆದಿದೆ ಆದು ಸಮರ್ಪಕವಾಗಿಲ್ಲವೆಂದು ಹೇಳುತ್ತೇನೆ. ಆದುದರಿಂದ ದಯವಾಡಿ ಇದರ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿ ನೋಡಿ, ಏತಕ್ಕೆಂದರೆ ನಾನು ಅಲ್ಲಿಗೆ ಖುದ್ದಾಗಿ ಹೋಗಿ ನೋಡಿಕೊಂಡು ಬಂದಿದ್ದೇನೆ. ಇದರ ಬಗ್ಗೆ ಸರಿಯಾದ ತನಿಖೆಯನ್ನು ನಡೆಸಿ ಮತ್ತು ಎರಡನೆಯದಾಗಿ ಅಲ್ಲಿ ಕೆಲಸ ಮಾಡುತ್ತಿರತಕ್ಕಂಥವರು ಮಣ್ಣಿನ ಮಕ್ಕಳು, ನಮ್ಮ ದೇಶ ಅವರ ಭವಿಷ್ಯದ ಮೇಲೆ ನಿಂತಿರುವಾಗ ಅವರಿಗೆ ರಕ್ಷಣೆಯನ್ನು ಕೊಡುವುದು ಸರ್ಕಾರದವರ ಕರ್ತವ್ಯವಾಗಿದೆ, ಆದಷ್ಟು ಜಾಗ್ರತೆಯಾಗಿ ಸತ್ತವರ ಕುಟುಂಬದವರಿಗೆ ಪರಿಹಾರವನ್ನು ಒದಗಿಸಿ ಕೊಡುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಅಧ್ಯಕ್ಷರೇ, ಇದರಲ್ಲಿ ಅಧಿಕಾರಿಗಳ ತಪ್ಪು ಇದೆ ಎಂದು ಹೇಳುವುದಾದರೆ ನಾನಂ ಒಪ್ಪುವುದಕ್ಕೆ ಆಗುವುದಿಲ್ಲ. ಏತಕ್ಕೆಂದರೆ ಅಲ್ಲಿ ಕೆಲಸ ಮಾಡತಕ್ಕಂಥವರೆಲ್ಲಾ ಗುತ್ತಿಗೆ

ದಾರರ ಕೈಕೆಳಗೆ ಕೆಲಸ ಮಾಡುತ್ತಿದ್ದಾರೆ ಅಲ್ಲಿರುವ ಗುತ್ತಿಗೆದಾರರು ಅವರಿಗೆ ಸಾಕಷ್ಟು ಸಹಾಯ ಸೌಲತ್ತುಗಳನ್ನು ಒದಗಿಸಿ ಕೊಟ್ಟಿದ್ದಾರೆ. ಸರ್ಕಾರದಿಂದಲೂ ಸಹ ಅವರಿಗೆ ದೊರೆಯಬಹುದಾದ ಎಲ್ಲಾ ಸಹಾಯ ಸೌಲಭ್ಯಗಳನ್ನು ಒದಗಿಸಿಕೊಡುವುದರಲ್ಲಿ ನಾವು ಹಿಂದೆಟುಂ ಹಾಕುವುದಿಲ್ಲ. ಮಾನ್ಯ ಸದಸ್ಯರು ಹೇಳಿದರು ಪೋಲೀಸ್ ತನಿಖೆ ಸರಿಯಾಗಿಲ್ಲವೆಂದು, ಆದರೆ ಇನ್ನೂ ತನಿಖೆ ನಡೆಯುತ್ತಿದೆ, ಸಂಬಂಧಪಟ್ಟ ಕಂಟ್ರ್ಯಾಕ್ಟರ್ ಯಾರಿದ್ದಾರೆ ಅವರ ಮೇಲೆ ಈಗಾಗಲೇ ಕ್ರಮ ಕೈಗೊಂಡು ಕೇಸ್ ಹಾಕಿದ್ದೇವೆ. ತನಿಖೆ ಮುಂದುವರಿದಿದೆ, ಯಾವುದೂ ಇನ್ನು ತೀರ್ಮಾನಕ್ಕೆ ಬಂದಿಲ್ಲ.

Constitution of a Committee for Water Tax

445. SRI M. S. ATMANANDA (Mandya).—Will the Minister of State for Major and Medium Irrigation be pleased to state :—

(*a*) whether it is a fact that assurances were given on the floor of this House that the Committee would be constituted by the Government to decide the water rates imposed on sugarcane and paddy crops ;

(*b*) if so, the reasons for not constituting this Committee so far ;

(*c*) when the Government will decide to constitute this Committee ?

SRI B.B. CHIMMANAKATTI (Minister of State for Major and Medium Irrigation).—

(*a*) Yes.

(*b*) This Committee has been constituted under the Chairmanship of Chief Minister *Vide* Government Order No. PWD 2 MLA 80, dated 10-4-1980.

(*c*) Does not arise in view of the reply to (*b*) above.

ಶ್ರೀ ಎಮ್.ಎಸ್. ಆತ್ಮಾನಂದ.—(ಆ)ಗೆ ಉತ್ತರದಲ್ಲಿ ೧೦ ನೇ ಏಪ್ರಿಲ್ ೧೯೮೦ ರಂದು ಸಮಿತಿಯನ್ನು ರಚಿಸಲಾಗಿದೆ ಎಂದು ಹೇಳಿದ್ದೀರಿ. ಆ ಸಮಿತಿಯಲ್ಲಿ ಸದಸ್ಯರು ಯಾರು ಯಾರಿದ್ದಾರೆ ಹಾಗೂ ಆ ಸಮಿತಿ ಎಷ್ಟು ಸಲ ಸಭೆ ಸೇರಿ ನೀರಿನ ದರದ ಬಗ್ಗೆ ಚರ್ಚೆ ಮಾಡಿ ನಿಗದಿ ಮಾಡಿದ್ದಾರೆಯೆಂಬುದನ್ನು ತಿಳಿಸಬೇಕು.

† ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಅಧ್ಯಕ್ಷರೇ, ಈ ನೀರಿನ ದರವನ್ನು ನಿಗದಿ ಮಾಡುವ ಸಲುವಾಗಿ ಮುಖ್ಯ ಮಂತ್ರಿಗಳವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಲಾಗಿದೆ. ಆದರಲ್ಲಿ ಯಾರು ಯಾರಿದ್ದಾರೆಂಬುದನ್ನು ಹೇಳುವುದಾದರೆ. ಆದರಲ್ಲಿ ಹಣಕಾಸಿನ ಮಂತ್ರಿಗಳವರು ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ರಾಜ್ಯ ಮಂತ್ರಿಗಳವರು. ರೆವಿನ್ಯೂ ಕಮಿಷನರ್, ಸೆಕ್ರೆಟರಿ ಫೈನಾನ್ಸ್ ಡಿಪಾರ್ಟ್‌ಮೆಂಟ್, ಮತ್ತು ಸೆಕ್ರೆಟರಿ ಪಬ್ಲಿಕ್ ವರ್ಕ್ಸ್ ಮತ್ತು ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್ ಮತ್ತೆ ಮಾನ್ಯ ಶ್ರೀ ಎಚ್.ಡಿ. ಚೌಡಯ್ಯ, ಶ್ರೀಮತಿ ಬಿ. ಬಸವರಾಜೇಶ್ವರಿ ಶ್ರೀ ಎಚ್.ಸಿ. ಶ್ರೀಕಂಠಯ್ಯ, ಶ್ರೀ ಆರ್.ಜಿ. ರಾಜಶೇಖರ್, ಶ್ರೀ ಎಲ್.ಎಸ್. ನಾಯಕ ಮತ್ತು ಶ್ರೀ ಜಿ.ಎಸ್. ದೇಶಮುಖ್. ಶ್ರೀ ಬಿ.ಆರ್. ಪಾಟೀಲ್ ಮತ್ತೆ ಅದರಲ್ಲಿ ಅಡಿಷನಲ್ ಸೆಕ್ರೆಟರಿ ಇರಿಗೇಷನ್ ಇವರೆಲ್ಲಾ ಆ ಸಮಿತಿಯಲ್ಲಿ ಸದಸ್ಯರಾಗಿದ್ದಾರೆ.